ಶೀಪ್ರುದಲ್ಲಿ ಮಾಡಿ ಸಾಕಷ್ಟು ಹಣ ಗಳಿಸಿದ. ಆತನ ಅಮೆರಿಕದ ಗೆಳೆಯರು ರಾಜಕೀಯದಲ್ಲಿ ಕೆಲಸ ಮಾಡುತ್ತಿದ್ದರು. ಈತನಿಗೂ ಅದರ ರುಚಿ ಹತ್ತಿತು. ಪ್ರಾಜೆಕ್ಟ್‌ಗಳನ್ನು ಮಾಡುವಾಗ ದೆಹಲಿಯ ಅನೇಕ ರಾಜಕಾರಣಿಗಳ ಪರಿಚಯವೂ ಆಗಿತ್ತು. ಅನೇಕ ಸಾರಿ ಅವರೊಂದಿಗೆ ಭಾರತ ರಾಜಕಾರಣದ ಚರ್ಚೆ ಮಾಡಿದ್ದ. ಹಣ ಇದ್ದರೆ ಚುನಾವಣೆ ಗೆಲ್ಲಬಹುದೆಂದು ಎಲ್ಲರೂ ವಾದ ಮಾಡುತ್ತಿದ್ದರು. ಅದರಲ್ಲೂ ಬೆಂಗಳೂರಿನ ಮಾರುಕಟ್ಟೆ ವಶಪಡಿಸಿಕೊಳ್ಳಲು ರಾಜಕೀಯ ಅಧಿಕಾರ ಬೇಕು ಎಂದು ಹೇಳುತ್ತಿದ್ದರು. ಆತನ ಅನೇಕ ಗೆಳೆಯರು ಬೆಂಗಳೂರಿನ ಭೂಮಿ ಮೇಲೆ ಸಾಕಷ್ಟು ಹಣ ತೊಡಗಿಸಿದ್ದರು. ಪುರುಷೋತ್ತಮನು ತನ್ನ ಹಣವನ್ನು ಬೆಂಗಳೂರಿನಲ್ಲಿ ಭೂಮಿ ಕೊಂಡುಕೊಂಡು ಅವುಗಳನ್ನು ಸೈಟ್ ಮಾಡಿ ಮಾರಾಟ ಮಾಡುವ ಯೋಜನೆ ರೂಪಿಸಿದ್ದ. ಅದಕ್ಕೆ ಕೊಡಬೇಕಾದ ಲಂಚದ ಬಗ್ಗೆಯೇ ಗಾಬರಿಯಾಗಿದ್ದ. ಯಾಕೆ ತಾನೆ ಚುನಾವಣೆಗೆ ನಿಲ್ಲಬಾರದೆಂದು ಯೋಚಿಸಿ ಅಲ್ಲಿಯ ರಾಜಕೀಯ ಸಂಪರ್ಕದಿಂದ ಟಿಕೆಟ್ ಪಡೆದುಕೊಂಡಿದ್ದ.

ಅನೇಕರು ಪುರುಷೋತ್ತಮನಿಗೆ ಟಿಕೆಟ್ ಕೊಡುವುದನ್ನು ವಿರೋಧಿಸಿದ್ದರು. ಆಗ ಪಾರ್ಟಿ ಹಿರಿಯರು 'ನಿಮ್ಮ ಮುಖ ನೋಡಿ ಯಾರು ಈಗ ಓಟು ಹಾಕ್ತಾರ. ಇಷ್ಟು ದಿನ ರಾಜಕಾರಣ ಮಾಡಿ ನಿಮ್ಮೂರುಗಳಿಗೆ ಸರಿಯಾಗಿ ರಸ್ತೆ ಮಾಡಲಿಲ್ಲ. ಕುಡಿಯಲು ನೀರು ಕೊಡಲಿಲ್ಲ. ಎಷ್ಟು ದಿನಂತ ಜನರನ್ನ ಮೂರ್ಖರನ್ನಾಗಿ ಮಾಡ್ತೀರಿ. ಅಮೆರಿಕದಲ್ಲಿ ಕೆಲಸ ಮಾಡಿದ ಹುಡುಗ ಅಂದರ ಜನ ಒಲಿಬಹುದು. ಈ ಸಲ ಇದೊಂದು ದಾಳ ಉರುಳುಸೋಣ. ಆತ ಹಣ ಖರ್ಚು ಮಾಡಾಕು ತಯ್ಯಾರು ಅದಾನ. ನೀವು ಕಾರ್ಯಕರ್ತರಾಗಿ ಕೆಲಸ ಮಾಡಿರಿ. ಗೆದ್ದ ಮ್ಯಾಲೆ ಮುಂದಿದು ನೋಡಾಮು' ಎಂದು ಹೇಳಿ ಟಿಕೆಟ್ ಕೊಟ್ಟಿದ್ದರು.

ಕುರ್ಚಿ ಮೇಲೆ ಕುಳಿತಿದ್ದ ಗೌಡರಿಗೆ ನೆಲ ಕುಸಿದಂತಾಗಿ ದಡಗ್ಗನ ಎದ್ದು, 'ಲೇ ಕೆಂಚ...' ಎಂದು ಕೂಗಿದರು. 'ಯಪ್ಪೋ...' 'ಲೇ... ಈ ಚುನಾವಣೆ ಮುಗಿತನಕ ಆಕಿನ್ನ ನೆನಸಬಾಡಲೇ ನಿಮ್ಮವ್ವನ. ನನಗ ಉಸಿರು ಕಟ್ಟಿಬುಡುತದ' ಎಂದು ಸ್ನಾನಕ್ಕ ಹೋದರು.

'ಲೇ... ಕೆಂಚ ಆ ಸಾಮಾನೆಲ್ಲ ಊರು ಊರುಗೆ ಹಂಚಬೇಕು. ಎಲ್ಲಾ ಒಂದು ಕಡೆ ಜೋಡಿಸಿಡು. ನಾನಿಷ್ಟು ಊರು ಕಡೆ ಹೋಗಿ ಬರ್ತೀನಿ' ಎಂದು ಊರು ಕಡೆ ಹೊರಟರು.

ಸೀದಾ ನಿಂಗಪ್ಪಗೌಡನ ಮನಿಗೆ ಹೋದರು. ಅದೇ ಲಿಂಗಪೂಜೆ ಮಾಡಿ ಕುಂತಗಂಡಿದ್ದರು. 'ಬಾರಪ ನಿನ್ನ ದಾರೀನೇ ಕಾಯಿತಿದ್ದೆ. ಊಟ ಆಯಿತನು. ಬಿಸಿ ರೊಟ್ಟಿ ಮಾಡ್ತಾರ ಉಣ್ಣು.' 'ಬ್ಯಾಡ, ನಿಂದು ಆಗಲಿ. ಯಾಕ ಮನಸು ಸರಿ ಇಲ್ಲ. ತಾತ ವೀರನಗೌಡ ಮುಂಜಾನೆ ನಿನಗ ಇದು ನೀಗದಿಲ್ಲ ಇದಕ ಕೈ ಹಾಕಬಾಡ ಅಂದಂಗಾಯ್ತು. ಅದಕ ನನಗ ಜೀವ ಜಲ್ ಅಂತು. ಏನಾತದೋ.' 'ಅಯ್ಯೋ ಅದಕ್ಕೆಲ್ಲ ತೆಲಿ ಕೆಡಿಸಿಗ್ಯಾಬ್ಯಾಡ. ನಾವು ಇದ್ದೀವಿ. ಈಗ ಜನಕ್ಕ ಮುಖ ತೋರಸದಕ ಇರೋ ದಾರಿ ನಿಮ್ಮ ಮಗನ. ಆತಗ ಜನ ಓಟು ಹಾಕ್ತಾರ. ಅದಕ್ಕೆಲ್ಲ ಲೆಕ್ಕ ಹಾಕಿ ವ್ಯವಸ್ಥಾ ಮಾಡಿಟ್ಟೇವಿ. ದಲಿತರ ಓಟು ಭಾಳ ಆವ. ಅವರಿಗೆ ಎಲ್ಲದಕ್ಕಿಂತ ಈಗ ಶಿಕ್ಷಣ ಬೇಕಾಗ್ಯಾದ. ಅದಕ್ಕ ಪಾಟಿ, ಪೆನ್ಸಿಲ್, ಪುಸ್ತಕ ಹಂಚೋದು. ಕೇರಿಗೊಂದು ಸ್ವಂತ ಖರ್ಚಿನಲ್ಲಿ ಶಾಲೆ ತೆರೆಯುತ್ತೇವೆಂದು ಭರವಸೆ ನೀಡೋದು. ಮತ್ತೆ ಹ್ಯಾಗೋ ಇಷ್ಟು ದುಡ್ಡು ಹಂಚೋದು ಇದ್ದೇ ಇದೆ. ಗೆಲ್ಲೋದು ಸುಲಭೈತಿ ನೀ ಚಿಂತಿ ಮಾಡಬ್ಯಾಡ. ನಡಿ ಹೋಗಮು. ಎಲ್ಲಾ ಮುಖಂಡರು ಬರ್ತೀವಿ ಅಂದಾರ. ಒಮ್ಮೆ ಕುಂತು ಮಾತಾಡಮು' ಎಂದು ಹಿರಿಯ ಮುಖಂಡ ಸಿದ್ದಲಿಂಗಪ್ಪನ ಮನೆ ಕಡೆ ಹೊರಟರು.

ಮಲ್ಲನಗೌಡ, ನಿಂಗನಗೌಡ, ಸೂಗನಗೌಡ, ವೀರನಗೌಡ ಬಂದಿದ್ದರು. 'ಈ ಚುನಾವಣೆ ಗೆಲ್ಲೋದು ಸುಲಭೈತಿ. ಕೆಂಚನ ಈಗ ಸರಿಯಾಗಿ ಬಳಿಸ್ಯಾಗ್ಯಾಬೇಕು. ಪ್ರಚಾರಕ್ಕ ಹೋದಲ್ಲೆಲ್ಲ ಅವನನ್ನ ಕರಕೊಂಡು ಹೋಗಬೇಕು. ಒಬ್ಬ ದಲಿತನನ್ನ ಮನ್ಯಾಗಿಟುಕೊಂಡು ಸಾಕೀವಿ. ಮಗನಂಗ ನೋಡೀವಿ.